ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಮಾನ್ಯ ಅಧ್ಯಕ್ಷರೆ, ಅವರಿಗೆ ಜಮೀನಿನ ಮಾಲೀಕತ್ವ ಕೊಟ್ಟಿಲ್ಲ. ಆ ಕೇಸ್ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ತೀರ್ಮಾನವಾಗಬೇಕಾಗಿದೆ. ಅಲ್ಲಿ ಅದು ತೀರ್ಮಾನವಾಗುತ್ತದೆ. ಅದು ಸರ್ಕಾರಿ ಜಮೀನು ಎಂದು ತೀರ್ಮಾನ ಆಗಬೇಕಾಗಿದೆ. ಅದರ ಬಗ್ಗೆ ತಾವೇನೂ ಚಿಂತೆ ಪಡಬೇಕಾಗಿಲ್ಲ. ಇದು ಈಗ ಉಚ್ಚನ್ಯಾಯಾಲಯದಲ್ಲಿ ಇರತಕ್ಕಂಥ ಪ್ರಕರಣ ಹಾಗೂ ಜಿಲ್ಲಾಧಿಕಾರಿಗಳು ಅದನ್ನು ಈಗಲೇ ಮಾಡಬೇಕು, ಇವತ್ತೇ ಮಾಡಬೇಕೆಂದು ಆದೇಶ ಕೊಡುವುದಕ್ಕೆ ಸಾಧ್ಯವಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಈಗ ಏನು ಮಾಡುತ್ತಾರೆಂದರೆ ಯಾರು ಅನಧಿಕೃತವಾಗಿ ಇರುತ್ತಾರೆ, ಅವರಿಗೆ ಕಾನೂನಿನ ರೀತ್ಯಾ ಹಕ್ಕು ಇರುವುದಿಲ್ಲ. ಆದರೆ ಅವರು ಮುದ್ದಾಮ್ ಏನೋ ಒಂದು ಕೇಸ್ ಫೈಲ್ ಮಾಡಿ ಡಿಲೇ ಮಾಡುತ್ತಾ ಇರುತ್ತಾರೆ. ಆದ್ದರಿಂದ ಇದು ಕೋಟ್ಯಾಂತರ ರೂಪಾಯಿ ಬೆಲೆ ಬಾಳುವ ಆಸ್ತಿಯಾಗಿದೆ. ಇದನ್ನು ಹಾಗೆಯೇ ಬಿಟ್ಟರೆ ಸರ್ಕಾರಕ್ಕೆ ನಷ್ಟವಾಗುತ್ತದೆ. ಹಾಗಾಗಿ, ಇದನ್ನು ಗಂಭೀರವಾಗಿ ತೆಗೆದುಕೊಂಡು ಆದಷ್ಟು ಬೇಗ ಸೆಟ್‌ರೈಟ್ ಆಗುವ ಹಾಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

12.30 ಪಿ.ಎಂ

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಆದಷ್ಟು ಜಾಗ್ರತೆ, ಮರಗಳನ್ನು ಹರಾಜು ಹಾಕಿಸಿ, ಆದರಿಂದ ಬರುವ ಹಣವನ್ನು ಸರ್ಕಾರಕ್ಕೆ ಜಮಾ ಮಾಡಿಸಿ, ಆ ಜಮೀನಿನ ಮಾಲೀಕತ್ವವನ್ನು ಅಂದರೆ ಈಗ ತಹಶೀಲ್ದಾರ್‌ರವರು ಪಹಣಿ ಮಾಡಿ ಏನು ಆದೇಶ ಕೊಟ್ಟಿದ್ದಾರೆ ಅದನ್ನು ರದ್ದುಪಡಿಸಿ, ಜಮೀನನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತೇನೆ.

ರಾಜ್ಯದ ಭೂ ನ್ಯಾಯ ಮಂಡಳಿಯಲ್ಲಿರುವ ಅರ್ಜಿಗಳು

432 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಭೂ-ನ್ಯಾಯ ಮಂಡಳಿಯಲ್ಲಿ ಎಷ್ಟು ಅರ್ಜಿಗಳು ಬಾಕಿ ಉಳಿದಿವೆ? ಇದರ ಬಗ್ಗೆ ನ್ಯಾಯಾಲಯಗಳಲ್ಲಿ ಎಷ್ಟು ಮೊಕದ್ದಮೆ ಬಾಕಿ ಉಳಿದಿವೆ?

ಆ) ತುರ್ತು ವಿಲೇವಾರಿಗಾಗಿ ಸರ್ಕಾರಿ ವಕೀಲರ ಮೂಲಕ ಮೊಕದ್ದಮೆಗಳನ್ನು ಇತ್ಯರ್ಥಗೊಳಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಭೂ ನ್ಯಾಯ ಮಂಡಳಿಗಳಲ್ಲಿ 13,724 ಪ್ರಕರಣಗಳು ಬಾಕಿ ಇರುತ್ತದೆ. ಅದರಲ್ಲಿ 9119 ಪ್ರಕರಣಗಳು ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ.

ಆ) ಹೌದು.

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೆ, ನಾನು ಕೇಳಿದ (ಅ) ಪ್ರಶ್ನೆಗೆ ಮಾನ್ಯ ಸಚಿವರು ಉತ್ತರಿಸಿದ್ದಾರೆ. ತಮಗೆ ಗೊತ್ತಿರುವ ಪ್ರಕಾರ, ಸರ್ಕಾರದ ಪರವಾಗಿ ವಾದಿಸುವ ವಕೀಲರು ಯಾವ ರೀತಿಯಾಗಿ ಕಾಳಜಿ ವಹಿಸಿರುವುದರಿಂದಾಗಿ ಪ್ರಕರಣಗಳು ಇಷ್ಟು ಬಾಕಿ ಇವೆ? ಅದರ ಬಗ್ಗೆ ಕಾನೂನು ಇಲಾಖೆಯಿಂದ ಅವರಿಗೆ ಸರಿಯಾದ ನಿರ್ದೇಶನ ಹೋಗಬೇಕಾಗಿದೆ. ನಾನು ಕೇಳಿದ (ಆ) ಪ್ರಶ್ನೆಗೂ ಮಾನ್ಯ ಸಚಿವರು ಉತ್ತರಿಸಿದ್ದು, ಇಲ್ಲಿಯವರೆಗೂ ಭೂ-ನ್ಯಾಯ ಮಂಡಳಿಗಳಲ್ಲಿ ಕಾನೂನು ಪರಿಣಿತ ಅಥವಾ ವಿದ್ಯಾವಂತರ ಸೇರ್ಪಡೆ ಇರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು, ಕನಿಷ್ಠ ಪಿ.ಯು.ಸಿ. ವರೆಗಾದರೂ ಓದಿರುವ ವಿದ್ಯಾವಂತರನ್ನು ನೇಮಿಸಬೇಕೆಂಬ ಬಗ್ಗೆ ಆದೇಶ ಹೊರಡಿಸಿದ್ದು, ಅವರನ್ನು ನಾನು ಅಭಿನಂದಿಸುತ್ತೇನೆ. ಎ.ಸಿ. ಏನು ಚೇರ್ಮನ್‌ರಾಗಿರುತ್ತಾರೆ, ಅವರಿಗೆ ಯಾವ ಒಂದು ಕಾನೂನಿನ ಪರಿಜ್ಞಾನವಿದೆ, ಆದರಿಂದ ಯರ್ರಾ ಬಿರ್ರಿ ಮಾಡುವುದರಿಂದ ಹೀಗೆ ಆಗಬಹುದು. ದಯವಿಟ್ಟು, ಕಾನೂನಿನ ಪ್ರಕಾರ ಪ್ರಕರಣಗಳನ್ನು ತುರ್ತಾಗಿ ಇತ್ಯರ್ಥಗೊಳಿಸುವುದಕ್ಕೆ ಸರ್ಕಾರಿ ವಕೀಲರನ್ನು ಅಥವಾ ಕಾನೂನು ತಜ್ಞರನ್ನು ನೇಮಕ ಮಾಡುವುದಕ್ಕೆ ಸರ್ಕಾರ ಮುಂದಾಗುತ್ತದೆಯೇ? ಇದರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಗೊಳಿಸಲು ಅಲ್ಲಿ ಒಂದು ಅಥವಾ ಎರಡು ವಿಶೇಷ ನ್ಯಾಯಾಲಯ ಬೆಂಚುಗಳನ್ನು ಸ್ಥಾಪಿಸಬೇಕೆಂದು ಯೋಚಿಸಿ, ಆ ಬಗ್ಗೆ ಆಡ್ವೋಕೇಟ್ ಜನರಲ್‌ರೊಡನೆ ನಾವು ವ್ಯವಹಾರ ಮಾಡುತ್ತಿದ್ದೇವೆ. ಉಚ್ಚ ನ್ಯಾಯಾಲಯದ ಮುಂದೆ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ರಾಜ್ಯದ ನಾಲ್ಕು ವಿಭಾಗಗಳಲ್ಲಿ ವಿಶೇಷ ಟ್ರಿಬ್ಯುನಲ್‌ಗಳನ್ನು ಸ್ಥಾಪಿಸಲು ಯೋಚಿಸಿದ್ದೆವು. ಆದರೆ, ವಿಶೇಷ ಟ್ರಿಬ್ಯುನಲ್‌ಗಳನ್ನು ಕೈಗೊಳ್ಳುವ ತೀರ್ಮಾನಗಳನ್ನು ಉಚ್ಚ- ನ್ಯಾಯಾಲಯದಲ್ಲಿ ಮತ್ತೆ ಪ್ರಶ್ನಿಸಬಹುದಾಗಿರುವುದರಿಂದ, ಕೆಲಸ ದ್ವಿಗುಣಗೊಳ್ಳುತ್ತದೆಂದು ಅದನ್ನು ಈಗಾಗಲೇ ಕೈಬಿಡಲಾಗಿದೆ. ಉಚ್ಚ-ನ್ಯಾಯಾಲಯದ ಒಂದು ತೀರ್ಪಿನಲ್ಲಿ ವಿದ್ಯಾರ್ಥಿಯ ವಿದ್ಯಾರ್ಹತೆಯನ್ನು ನಿಗದಿಪಡಿಸಲು ಹಾಗೂ ಜಿಲ್ಲಾಮಟ್ಟದ ಅಪೆಲೆಟ್ ಅಧಿಕಾರಿಗಳನ್ನು ಸ್ಥಾಪಿಸಲು ತಿಳಿಸಿತ್ತು. ವಿದ್ಯಾರ್ಥಿಯ ವಿದ್ಯಾರ್ಹತೆಯನ್ನು ಎಸ್‌ಸಿ/ಎಸ್‌ಟಿಗಳಿಗೆ 8ನೇ ತರಗತಿ ಮತ್ತು ಇತರರಿಗೆ 12ನೇ ತರಗತಿ ಎಂದು ನಿಗದಿಪಡಿಸಲು ಜಿಲ್ಲಾಮಟ್ಟದ ಅಪೆಲೆಟ್ ಅಥಾರಿಟಿಗಳನ್ನು ಸ್ಥಾಪಿಸುವ ಬದಲಾಗಿ ನಾಲ್ಕು ವಿಭಾಗಗಳಲ್ಲಿ ನಾಲ್ಕು ಅಪೆಲೆಟ್ ಅಥಾರಿಟಿಗಳನ್ನು ಸ್ಥಾಪಿಸಿ, ತೀರ್ಮಾನಿಸಲು ಈಗಾಗಲೇ ನಾವು ಪರಿಶೀಲಿಸುತ್ತಿದ್ದೇವೆ.

ಶ್ರೀ ಅಂಜನಮೂರ್ತಿ : ಇವತ್ತು ತಾಲ್ಲೂಕು ಮಟ್ಟದಲ್ಲಿ ಟ್ರಿಬ್ಯುನಲ್‌ಗಳು ನಡೆಯುತ್ತಿವೆ. ಅದಕ್ಕೆ ಸರ್ಕಾರದ ವತಿಯಿಂದ ವಕೀಲರನ್ನು ನೇಮಿಸಿದರೆ ಕಾನೂನುಬದ್ಧವಾಗಿ ಖಟ್ಲೆಗಳನ್ನು ಇತ್ಯಾರ್ಥಪಡಿಸಲು ಸಾಧ್ಯವಾಗುತ್ತದೆ. ಆ ಬಗ್ಗೆ ಸರ್ಕಾರವೇನು ಕ್ರಮ ತೆಗೆದುಕೊಳ್ಳುತ್ತದೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಈಗಾಗಲೇ ತಾಲ್ಲೂಕುಮಟ್ಟದಲ್ಲಿ ಸಮಿತಿಯನ್ನು ನೇಮಿಸಿದ್ದು, ವಿದ್ಯಾರ್ಹತೆಯನ್ನು ನಿಗದಿಪಡಿಸಿದೆ. ಸರ್ಕಾರಿ ವಕೀಲರ ನೇಮಕದ ಬಗ್ಗೆ ನಾನು ಯೋಚನೆ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ಭೂ-ನ್ಯಾಯ ಮಂಡಳಿಗಳಲ್ಲಿ ಪ್ರಕರಣಗಳು ಬಾಕಿ ಇವೆ. ಆದರೆ, ಭೂ ನ್ಯಾಯ ಮಂಡಳಿಗಳಿಗೆ ತಾವೇನು ಸದಸ್ಯರನ್ನು ನೇಮಿಸಿದ್ದೀರಿ, ಅದಕ್ಕೆ ತಡೆಯಾಜ್ಞೆಯಾಗಿದೆ. ಆ ರೀತಿ ಇದ್ದರೂ, ಮಂಡಳಿಗಳನ್ನು ನಡೆಸುತ್ತೀರಾ? ಇದೊಂದು ಮಹತ್ವದ ಪ್ರಶ್ನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಶ್ರೀ ಎಸ್.ಪಿ. ಮುದ್ದಹನುಮೇಗೌಡರವರು, ಶ್ರೀ.ಡಿ.ವಿ. ಸದಾನಂದಗೌಡರವರು ತಂದಿರುವ ತಡೆಯಾಜ್ಞೆ ಬಗ್ಗೆ ಚರ್ಚೆಯಾಯಿತು. ಅದು ರೆಕಾರ್ಡ್‌ಗೆ ಹೋಗಿದೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ತಡೆಯಾಜ್ಞೆ ತೆರವು ಮಾಡಿಸಲು ಸರ್ಕಾರ ಪರಿಶೀಲಿಸುತ್ತಿದ್ದು, ಅದಕ್ಕೆ ಕ್ರಮ ತೆಗೆದುಕೊಂಡಿದೆ.

ಶ್ರೀ ಡಿ.ವಿ. ಸದಾನಂದಗೌಡ : ತಡೆಯಾಜ್ಞೆ ಇದೆ. ಇದು ಸರ್ಕಾರದ ಗಮನಕ್ಕೆ ಯಾವಾಗ ಬಂದಿತು? ಈ ಸಂಬಂಧದಲ್ಲಿ ಸರ್ಕಾರದ ನಿಲುವೇನು? ಕೋರ್ಟಿನಲ್ಲಿ ಯಾವ ಸ್ಟೇಜ್‌ನಲ್ಲಿದೆ? Let them explain to the House.

ಅಧ್ಯಕ್ಷರು : ತಡೆಯಾಜ್ಞೆ ತೆರವು ಮಾಡಿಸಲು ಅರ್ಜಿ ಹಾಕಿಕೊಂಡಿದ್ದೇವೆಂದು ಹೇಳುತ್ತಿದ್ದಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಅದನ್ನು ತೆರವುಗೊಳಿಸಲು ನಾವು ಈಗಾಗಲೇ ಕ್ರಮ ತೆಗೆದುಕೊಂಡಿದ್ದು, ಅದನ್ನು ಶೀಘ್ರವಾಗಿ ತೆರವುಗೊಳಿಸಲು ಪ್ರಯತ್ನಿಸುತ್ತಿದ್ದೇವೆ. ಕಮಿಟಿಗಳನ್ನು ಈಗ ರಚನೆ ಮಾಡುವ ಹಾಗಿಲ್ಲ. ತಾಲ್ಲೂಕು ಕೇಂದ್ರಗಳು ಸಹ ತೀರ್ಮಾನ ತೆಗೆದುಕೊಳ್ಳುವುದಿಲ್ಲ.

ಪುನರ್ವಸತಿ ಸಮಸ್ಯೆಗಳ ನಿವಾರಣೆಗೆ ರಚಿತವಾದ ಸಮಿತಿಯ ಸಭೆ ಕರೆಯದಿರುವುದು

513 - ಶ್ರೀ ಪಿ.ಹೆಚ್. ಪೂಜಾರ್ (ಬಾಗಲಕೋಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪುನರ್ವಸತಿ ಸಮಸ್ಯೆಗಳ ನಿವಾರಣೆಗಾಗಿ ರಚಿತವಾದ ಸಮಿತಿಯನ್ನು ವಿಸರ್ಜನೆ ಮಾಡಲಾಗಿದೆಯೇ?*

ಆ) *ಹಾಗಿಲ್ಲದಿದ್ದಲ್ಲಿ, ಸಮಿತಿ ಸಭೆ ಕರೆಯದಿರಲು ಕಾರಣಗಳೇನು?*

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಇಲ್ಲ.

ಆ) ಪ್ರಥಮ ಸಭೆಯನ್ನು ದಿನಾಂಕ 28.6.2000ರಂದು ಮಾನ್ಯ ನಗರಾಭಿವೃದ್ಧಿ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿಸಲಾಗಿದೆ. ಸದರಿ ಸಭೆಗೆ ನಗರಾಭಿವೃದ್ಧಿ ಸಚಿವರೇ ಅಧ್ಯಕ್ಷರಾಗಿದ್ದು, ಅಧ್ಯಕ್ಷರ ನಿರ್ದೇಶನದ ಪ್ರಕಾರ ಮೇಲ್ಕಾಣಿಸಿದ ದಿನಾಂಕದಂದು ಸಭೆ ಕರೆಯಲಾಗಿತ್ತು. ಮಾನ್ಯ ಅಧ್ಯಕ್ಷರು ನಿಗಧಿಪಡಿಸಿದ ಪ್ರಕಾರ ಸಭೆಯನ್ನು ಪುನಃ ಕರೆಯಲಾಗುವುದು.